ಯಾರು? ಸರ್ಕಾರದ ಮಟ್ಟದಲ್ಲಿ ಉನ್ನತ ಶಿಕ್ಷಣ ಸಚಿವರಿಂದ ತನಿಖೆ ಆಗಬೇಕು. ತನಿಖೆ ಆಗಿ ತಪಿತಸ್ಥರ ವಿರುದ್ಧ ಕ್ರಮ ಆಗಬೇಕು. ಸಿಂಡಿಕೇಟ್‌ನಲ್ಲಿ ಎಲ್ಲ ಮುಚ್ಚಿಹಾಕುವ ಕೆಲಸಗಳು ಆಗುತ್ತದೆ, ಸರ್ಕಾರದಿಂದ ಒಂದು ತನಿಖೆ ಆಗಬೇಕೆಂದು ನಮ್ಮ ಒತ್ತಾಯವಾಗಿದೆ.

ಶ್ರೀ ಟಿ.ಬಿ. ಜಯಚಂದ್ರ: ಅಧ್ಯಕ್ಷರೆ, ದಯಮಾಡಿ ಅರ್ಥ ಮಾಡಿಕೊಳ್ಳಿ. ಈಗಾಗಲೇ ನೋಟಿಸ್ ಕೊಟ್ಟಿದೆ. ಅದರ ಬಗ್ಗೆ ಸಮಗ್ರವಾಗಿ enquiry ಮಾಡಿ, ಇವತ್ತು ನಿಮ್ಮ University rules ನ ವ್ಯಾಪ್ತಿಯಲ್ಲಿ ಸರ್ಕಾರ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

2. ವಿಷಯ: ಕೋಲಾರದ ನಂಗಲಿ ಬಳಿಯ ಕಗ್ಗನಹಳ್ಳಿಯ ದಲಿತ ಕುಟುಂಬದವರಿಗೆ ಸವರ್ಣೀಯ ವರ್ಗದವರು ಬಹಿಷ್ಕಾರ ಹಾಕಿರುವ ಬಗ್ಗೆ

ಶ್ರೀ ಗೋವಿಂದ ಎಂ. ಕಾರಜೋಳ (ಮುಧೋಳ): ಅಧ್ಯಕ್ಷರೆ, ಕೋಲಾರ ಜಿಲ್ಲೆ ದಲಿತ ಕುಟುಂಬಕ್ಕೆ ಬಹಿಷ್ಕಾರ ಹಾಕಿರುವ ಬಗ್ಗೆ 4 ದಿನಗಳಾಯಿತು. ಇನ್ನೂ ಉತ್ತರ ಕೊಟ್ಟಿಲ್ಲ.

ಅಧ್ಯಕ್ಷರು: ಸಮಾಜ ಕಲ್ಯಾಣ ಸಚಿವರು ಉತ್ತರವನ್ನು ಕೊಡಿ.

ಶ್ರೀ ಹೆಚ್. ಆಂಜನೇಯ (ಮಾನ್ಯ ಸಮಾಜ ಕಲ್ಯಾಣ ಸಚಿವರು): ಮಾನ್ಯ ಅಧ್ಯಕ್ಷರೆ, ದಿನಾಂಕ: 26–01–2014 ರಂದು ನಂಗಲಿ ಪೊಲೀಸ್ ಠಾಣೆಯಲ್ಲಿ ವರದಿಯಾದ ದಲಿತರಿಗೆ ಬಹಿಷ್ಕಾರ ಎಂಬ ವರದಿಯನ್ನು ಆಧರಿಸಿ ನಂಗಲಿ – ಪೊಲೀಸ್ ಠಾಣೆ ಮೊ.ಸಂ. 08/2014 ಕಲಂ 143, 147, 148, 149, ಐಪಿಸಿ, 3 (1) (10) ಎಸ್.ಸಿ. ಎಸ್.ಟಿ. ಪಿ.ಓ.ಎ. ಆಕ್ಟ್, 1989 ಮತ್ತು 4, 6, 7 ಪಿ.ಸಿ.ಆರ್. ಆಕ್ಟ್ 1955 ರೀತ್ಯಾ ಶಂಕರೆಡ್ಡಿ ಮತ್ತು ಇತರೆ 7 ಜನರ ವಿರುದ್ಧ ಪ್ರಕರಣ ದಾಖಲಾಗಿರುತ್ತದೆ.

ಈ ಗಂಭೀರವಾದ ಪ್ರಕರಣವನ್ನು ಡಿ.ಎಸ್.ಪಿ. ಮುಳಬಾಗಿಲು ರವರು ತನಿಖೆ ಕೈಗೊಂಡು ಆರೋಪಿಗಳ ಪತ್ತೆಗಾಗಿ ಶ್ರೀ ಕೃಷ್ಣಪ್ಪ ಸಿ.ಪಿ.ಐ. ಮುಳಬಾಗಿಲು ಮತ್ತು ಶ್ರೀ ಶ್ರೀಧರ್ ಪಿ.ಎಸ್.ಐ. ನಂಗಲಿ ಠಾಣೆ ಮತ್ತು ಶ್ರೀ ಶಂಕರಪ್ಪ ಪಿ.ಎಸ್.ಐ. (ಅ.ವಿ) ಮುಳಬಾಗಿಲು ರವರುಗಳ ಎರಡು ಪ್ರತ್ಯೇಕ

ತಂಡಗಳನ್ನು ರಚನೆ ಮಾಡಿ ಪತ್ತೆ ಕಾರ್ಯ ಚುರುಕುಗೊಳಿಸಿದರ ಹಿನ್ನೆಲೆಯಲ್ಲಿ ಎಲ್ಲಾ 8 ಜನ ಆರೋಪಿಗಳು ಎ1 ಶಂಕರೆಡ್ಡಿ ಬಿನ್ ವೆಂಕಟರೆಡ್ಡಿ, ಎ4 ಕೃಷ್ಣಾರೆಡ್ಡಿ ಬಿನ್ ಅಪ್ಪಿರೆಡ್ಡಿ, ಎ5 ಆಂಜನೇಯರೆಡ್ಡಿ ಬಿನ್ ಶಂಕರರೆಡ್ಡಿ, ಎ8 ಮುನಿವೆಂಕಟರೆಡ್ಡಿ ಬಿನ್ ಪಾಪಿರೆಡ್ಡಿ, ಈ ನಾಲ್ಕು ಜನ ಒಕ್ಕಲಿಗ ಜನಾಂಗದವರು, ಎ2 ಕೇಶವಪ್ಪ ಬಿನ್ ಚಿನ್ನಪ್ಪ, ಎ3 ಸುರೇಶ ಬಿನ್. ಚಿನ್ನಪ್ಪ, ಎ6 ಶ್ರೀನಿವಾಸ ಬಿನ್. ಕೃಷ್ಣಪ್ಪ, ಎ7 ನಾರಾಯಣ ಸ್ವಾಮಿ ಬಿನ್. ಕೃಷ್ಣಪ್ಪ ರವರು ನಾಯಕ ಜನಾಂಗದವರು (ಪ.ಪಂಗಡ) ದಿನಾಂಕ 29–01–2014 ರಂದು ಬೆಳಿಗ್ಗೆ 11.00 ಗಂಟೆಗೆ ಕೋಲಾರ ಜಿಲ್ಲೆ ಸತ್ರ ನ್ಯಾಯಾಲಯದ ಮುಂದೆ ಹಾಜರಾಗಿದ್ದು, ಘನ ಜಿಲ್ಲಾ ಸತ್ರ ನ್ಯಾಯಾಧೀಶರು ಇವರನ್ನು ನ್ಯಾಯಾಂಗ ಬಂಧನಕ್ಕೆ ಆದೇಶಿಸಿದ್ದು, ಈಗ ಕೋಲಾರ ಜಿಲ್ಲಾ ಕಾರಾಗೃಹದಲ್ಲಿ ಇರುತ್ತಾರೆ. ಇಂತಹ ಪ್ರಕರಣಗಳು ಮರುಕಳಿಸದಂತೆ ಮತ್ತು ಸಮಾಜದ ಎಲ್ಲಾ ವರ್ಗಗಳಲ್ಲಿ ಸಾಮರಸ್ಯವನ್ನು ತರಲು ಕ್ರಮತೆಗೆದುಕೊಳ್ಳುವ ಬಗ್ಗೆ ಎಲ್ಲಾ ಜಿಲ್ಲಾಧಿಕಾರಿಗಳಿಗೆ, ಪೊಲೀಸ್ ಅಧೀಕ್ಷಕರುಗಳಿಗೆ ಹಾಗೂ ಸಮಾಜ ಕಲ್ಯಾಣಾಧಿಕಾರಿಗಳಿಗೆ ಸೂಚಿಸಲಾಗುವುದು.

ಅಧ್ಯಕ್ಷರೆ, ಕೋಲಾರ ಜಿಲ್ಲೆಯ ಮುಳಬಾಗಿಲು ತಾಲ್ಲೂಕು ಕಗ್ಗನಹಳ್ಳಿ ಗ್ರಾಮ. ಆ ಗ್ರಾಮದಲ್ಲಿ ಸಾಮಾಜಿಕ ಬಹಿಷ್ಕಾರ ನಡೆದಿದೆ ಎಂದು ಹೇಳಿ 26ನೇ ತಾರೀಖು ಗಣರಾಜ್ಯೋತ್ಸವ ದಿನದಂದು ವಿಜಯ ಕರ್ನಾಟಕ ಪತ್ರಿಕೆಯ ಮುಖಪುಟದಲ್ಲಿ ಬಂದಿದೆ. ದಿನಾಂಕ 26 ರಂದು ಆ ಗ್ರಾಮಕ್ಕೆ ಹೋಗಬೇಕೆನ್ನುವ ಇಚ್ಛೆ ನನ್ನದಾಗಿತ್ತು. ಆದರೆ ಧ್ವಜಾರೋಹಣ ಕಾರ್ಯಕ್ರಮ ಇದ್ದಿದ್ದರಿಂದ ಅಲ್ಲಿಗೆ ಹೋಗುವುದಕ್ಕೆ ಆಗಲಿಲ್ಲ. ಆದರೂ ಬೆಳಿಗ್ಗೆ ಪತ್ರಿಕೆಯನ್ನು ನೋಡಿದ ತಕ್ಷಣವೇ ಸಂಬಂಧಿಸಿದ ಎಲ್ಲಾ ಅಧಿಕಾರಿಗಳು ಹಾಗೂ ಇಡೀ ಜಿಲ್ಲಾಡಳಿತ ಅಲ್ಲಿಗೆ ಹೋಗಿ ಆಗಿರತಕ್ಕಂಥ ಘಟನೆ ಬಗ್ಗೆ ಪೂರ್ಣವಾದ ಪರಿಶೀಲನೆ ಮಾಡಿದ್ದಾರೆ. ನಮ್ಮ CRE cellರವರನ್ನು ಕಳುಹಿಸಿದ್ದೇನೆ. ಸಮಾಜ ಕಲ್ಯಾಣ ಅಧಿಕಾರಿಗಳನ್ನು ಕಳುಹಿಸಿದ್ದೇನೆ. ಅಲ್ಲಿನ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಜಿಲ್ಲಾಧಿಕಾರಿಗಳು ಆ ಹಳ್ಳಿಗೆ ಹೋಗಿ ಅಲ್ಲಿ ಶಾಂತಿ ಸಭೆಯನ್ನು ಮಾಡಿದ್ದಾರೆ. ಸಾಮಾಜಿಕವಾಗಿ ದಲಿತರನ್ನು ಬಹಿಷ್ಕಾರ ಮಾಡಿದವರನ್ನು

ಹಾಗೂ ದಲಿತರನ್ನು ಕರೆಸಿ ಶಾಂತಿ ಸಭೆಯನ್ನು ಮಾಡಿದ್ದಾರೆ. ಆದಾದ ನಂತರ ಮತ್ತೆ ದಿನಾಂಕ 27 ರಂದು ನಾನು ಹೋಗಿ ಅವರೆಲ್ಲರ ಜೊತೆ ಮಾತನಾಡಿ, ಸಾಮರಸ್ಯ ಮೂಡಿಸುವುದಕ್ಕೆ ಮತ್ತು ಸಾಮಾಜಿಕ ಬಹಿಷ್ಕಾರವನ್ನು ವಾಪಸ್ ಪಡೆಯಲು ಎಲ್ಲ ಪ್ರಯತ್ನವನ್ನೂ ಮಾಡಿ ಅದರಲ್ಲಿ ಯಶಸ್ವಿಯೂ ಕೂಡ ಆಗಿದ್ದೇನೆ. Complaint ಕೊಟ್ಟಂಥ ಶ್ರೀ ನಾಗಭೂಷಣ್ ಎಂಬ ದಲಿತ ಯುವಕ, ಆತನನ್ನೂ ಕೂಡ ವಿಚಾರ ಮಾಡಿದೆ. ಆತನು ಸರ್, ಇಲ್ಲಿ ಒಂದು ಶಾಲೆಯಿದೆ. ಬಿಸಿಯೂಟದ ಸಹಾಯಕ ಹುದ್ದೆಯು ಒಬ್ಬ ಪರಿಶಿಷ್ಟ ಜಾತಿ ಮೀಸಲಿದ್ದು, ಅವರು ಅರ್ಜಿ ಹಾಕಿದ್ದಕ್ಕೋಸ್ಕರ ನಾಲ್ಕು ಜನ ಕುಟುಂಬಗಳಿಗೆ ಬಹಿಷ್ಕಾರ ಹಾಕಿದ್ದಾರೆಂದು ಹೇಳಿದರು. 18 ದಲಿತ ಅಸ್ಪೃಶ್ಯ ಜನಾಂಗಗಳಿವೆ. ಆ ಅಸ್ಪೃಶ್ಯ ಜನರಲ್ಲಿ 4 ಜನರ ಗುಂಪು. ಆ ಗುಂಪು ನ್ಯಾಯ ಕೇಳಿದ್ದಕ್ಕೋಸ್ಕರ ಎಲ್ಲ ಊರಿನವರು ಸೇರಿ ಅವರನ್ನು ಪ್ರತ್ಯೇಕವಾಗಿ ಇಟ್ಟರು. ಅವರು ಕೇಳಿದ್ದರಲ್ಲಿ ತಪ್ಪಿಲ್ಲ. ಮೀಸಲಾತಿ ಬಂದಿದೆ ನಮಗೆ ಆ ಹುದ್ದೆಯನ್ನು ಕೊಡಿಯೆಂದು ಕೇಳಿದ್ದೆ ತಪ್ಪಾಯಿತು. ಅದಕೋಸ್ಕರ ಸಾಮಾಜಿಕ ಬಹಿಷ್ಕಾರವನ್ನು ಹಾಕಿದರು. ಅವರನ್ನು ಬಹಿಷ್ಕಾರ ಹಾಕಿದ ತಕ್ಷಣ ಏನೇನು ಕ್ರಮ ತೆಗೆದುಕೊಳ್ಳಬೇಕಾಗಿತ್ತೋ ಆ ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಕೇವಲ ಅಷ್ಟೇ ಅಲ್ಲ, ನಾಗಭೂಷಣ್ ಎನ್ನುವವರು 8 ಜನರ ಮೇಲೆ complaint ಕೊಟ್ಟಿದ್ದರು. ಆ 8 ಜನರನ್ನು ನಮ್ಮ ಪೊಲೀಸ್ ಅಧಿಕಾರಿಗಳು ಬಂಧಿಸಿ, ಅವರನ್ನು ನ್ಯಾಯಾಲಯದ ಮುಂದೆ ಒಪ್ಪಿಸಿದ್ದಾರೆ. 4 ಜನ ಕುಟುಂಬದವರಿಗೂ ನಾನು ಆ ರೀತಿ ಸಾಮಾಜಿಕ ಬಹಿಷ್ಕಾರ ಮಾಡುವುದು ಸರಿಯಿಲ್ಲವೆಂದಾಗ ಅದಕ್ಕೆ ಅವರು ಮಾಡುವುದಿಲ್ಲವೆಂದರು ಹಾಗೂ ಅಲ್ಲಿರತಕ್ಕಂಥ ಸವರ್ಣೀಯರು ಬಹಳ ಒಳ್ಳೆಯ ಮನಸ್ಸಿನಿಂದ ನಾವು ಮಾಡಿದ್ದು ತಪ್ಪಾಯಿತು ಎಂದು ಪಶ್ಚಾತಾಪದ ಮಾತುಗಳನ್ನು ಆಡಿದ್ದಾರೆ. ನಮ್ಮದು ಕ್ಷಮಿಸೋ ಗುಣ. ಆದ್ದರಿಂದ, ಆ ಹುಡುಗನಿಗೆ ನೋಡಪ್ಪ ಏನು ಮಾಡುತ್ತೀಯ? ಎಂದು ಕೇಳಿದೆ. ಅದಕ್ಕೆ ಆತನು ನಾನು complaint ಕೊಡುತ್ತೇನೆಂದು ಹೇಳಿದನು. ಅದಕ್ಕೆ ನಾನು ಆತನಿಗೆ ಆಯಿತು, complaint ಕೊಡು. ತಪ್ಪು ಮಾಡಿದವರ ಮೇಲೆ enquiry ಆಗುತ್ತದೆ. ಅವರ ಮೇಲೆ ಕೇಸ್ ದಾಖಲು ಆಗುತ್ತದೆ ಎಂದು ಹೇಳಿ ಬಂದಿದ್ದೇನೆ. ಇಷ್ಟೇ ಅಲ್ಲ ಯಾರು ಸಾಮಾಜಿಕ ಬಹಿಷ್ಕಾರಕ್ಕೆ ಒಳಗಾಗಿದ್ದರು

ಅಂಥ ಕುಟುಂಬಗಳಿಗೆ ಒಂದು ತಿಂಗಳಿಗಾಗುವಷ್ಟು ಧವಸ–ಧಾನ್ಯಗಳನ್ನು ಕೊಟ್ಟು ಬಂದಿದ್ದೇನೆ. ಅವರ ಭದ್ರತೆಗೆ ಎಲ್ಲ ರೀತಿಯ ರಕ್ಷಣೆಯನ್ನು ಜಿಲ್ಲಾಡಳಿತ ಅವರಿಗೆ ಒದಗಿಸಿದೆ. ಅಲ್ಲಿ ಯಾರೂ ಕೂಡ ಯಾವುದೇ ರೀತಿಯ ಸಾಮಾಜಿಕ ಬಹಿಷ್ಕಾರವನ್ನು ಸಾರ್ವತ್ರಿಕವಾಗಿ ಎದುರಿಸುತ್ತಿಲ್ಲ. Complaint ಮಾಡಿರುವವರು ಹಾಗೂ ಅವರು ಪುನ: ಒಂದಾಗಿ ಬಾಳುವಂಥ ಸ್ಥಿತಿ ಅಲ್ಲಿ ನಿರ್ಮಾಣವಾಗಿದೆ. ನಮ್ಮ ಆಡಳಿತದಲ್ಲಿ ಯಾವುದೇ ರೀತಿಯ ಸಾಮಾಜಿಕ ಬಹಿಷ್ಕಾರ ಹಾಕುವಂಥ ಹೃದಯಹೀನರು ಈ ರಾಜ್ಯದಲ್ಲಿ ಇಲ್ಲ. ಹೃದಯವಂತರು ಇದ್ದಾರೆ. ಯಾರೋ ಕೆಲವು ಕಿಡಿಗೇಡಿಗಳು ಮಾಡಿರತಕ್ಕಂಥ ಒಂದು ತಪ್ಪಿನಿಂದಾಗಿ ಅದು ಅಷ್ಟೊಂದು ದೊಡ್ಡ ಪ್ರಕರಣವಾಗಿದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸರ್ಕಾರ ಯಶಸ್ವಿಯಾಗಿ ನಿಯಂತ್ರಣ ಮಾಡಿ, ಆ ಊರಿನಲ್ಲಿ ಸಾಮರಸ್ಯ ಮೂಡಿಸುವಂಥ ಕೆಲಸವನ್ನು ನಾನು ಹಾಗೂ ಮಾನ್ಯ ಮಾಜಿ ಲೋಕಸಭಾ ಸದಸ್ಯರಾದ ಮುನಿಯಪ್ಪನವರು ಮತ್ತು ಮಾನ್ಯ ಖಾದರ್‌ರವರು ಮತ್ತು ಅಲ್ಲಿ ಶಾಸಕರಾದಂಥ ಮಂಜುನಾಥ ರವರು, ಇಡೀ ಜಿಲ್ಲಾ ಪಂಚಾಯಿತಿ, ಜಿಲ್ಲಾಡಳಿತ ಸಂಪೂರ್ಣವಾಗಿ ಅಲ್ಲಿ ಮಾಡಿದ್ದೇವೆ. ಯಾವುದೇ ರೀತಿಯ ಸಾಮಾಜಿಕ ಬಹಿಷ್ಕಾರ ಅಲ್ಲಿ ಇಲ್ಲವೆಂದು ಗೌರವಾನ್ವಿತ ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.

ಶ್ರೀ ಗೋವಿಂದ ಎಂ. ಕಾರಜೋಳ: ಅಧ್ಯಕ್ಷರೆ, ಒಂದು ತಿಂಗಳಿಗೆ ಆಗುವಷ್ಟು ಅಕ್ಕಿ ಕೊಟ್ಟರೆ ಮುಗಿಯುತ್ತದೆಯೇ? ಅವರು ಗೌರವದಿಂದ, ಮಾನ–ಮರ್ಯಾದೆಯಿಂದ ಬದುಕಲು ಅವಕಾಶವಿಲ್ಲವೇನು? ಅದಕ್ಕೆ ಏನು ಮಾಡಿದ್ದೀರಿ ಹೇಳಿ. ಅಕ್ಕಿ, ಗೋದಿ, ಬೇಳೆ ಕೊಟ್ಟಿದ್ದೇವೆ ಎಂದರೆ ಆಗುವುದಿಲ್ಲ. ಭಿಕ್ಷೆ ಬೇಕಾಗಿಲ್ಲ. ಕಾನೂನು ಕ್ರಮ ತೆಗೆದುಕೊಳ್ಳಲಿ. Atrocities Act ಇದೆ. ಅವರು ಏನಾದರೂ ತಪ್ಪು ಮಾಡಿದರೆ ಅವರಿಗೆ ಶಿಕ್ಷೆ ಆಗಲಿ.

ಅಧ್ಯಕ್ಷರು: PTCL Act ನಲ್ಲಿ ಹಿಂದೆ ಅವರಿಗೆ ಪುನರ್‌ವಸತಿಯನ್ನು ನಾವು ಚಿಂತಾಮಣಿಯಲ್ಲಿ ಮಾಡಿದ್ದೇವೆ. ಆ ರೀತಿ ಅವರಿಗೆಲ್ಲ ಮಾಡಿಕೊಡಿ.

ಶ್ರೀ ಗೋವಿಂದ ಎಂ. ಕಾರಜೋಳ: ಅಧ್ಯಕ್ಷರೆ, ದಲಿತರು ಸಾಮಾಜಿಕ ಬಹಿಷ್ಕಾರಕ್ಕೆ ಒಳಗಾಗಿರುವರು ಏನು ದೂರನ್ನು ಕೊಟ್ಟಿದ್ದಾರೆ ಆ ದೂರನ್ನು ರಾಜ್ಯ ಸರ್ಕಾರ ಸ್ವೀಕರಿಸಲಿ.

ಅಧ್ಯಕ್ಷರು: ಚಿಂತಾಮಣಿಯಲ್ಲಿ ಮನೆಯೆಲ್ಲಾ ಮಾಡಿಕೊಟ್ಟಿದ್ದೆ. ಆದರೆ ಮನೆಗಳನ್ನೆಲ್ಲಾ ಅವರು ಮಾರಾಟ ಮಾಡಿಕೊಂಡಿದ್ದಾರೆ.

ಶ್ರೀ ಗೋವಿಂದ ಎಂ. ಕಾರಜೋಳ: ಅವರು ಏನೂ ಮಾಡಿಲ್ಲ. ಅಕ್ಕಿ ಮಾತ್ರ ಕೊಟ್ಟಿದ್ದಾರೆ. ಅವರಿಗೆ ಅಕ್ಕಿ ಬೇಡ. ಅವರು ಗೌರವದಿಂದ ಬದುಕಲು ಅವಕಾಶ ಮಾಡಿಕೊಡಿ.

ಶ್ರೀ ಹೆಚ್. ಆಂಜನೇಯ: ಅವರ ಗೌರವಕ್ಕೆ ಯಾವುದೇ ರೀತಿಯ ಧಕ್ಕೆ ಬಾರದಂತೆ ನಾವು ನೋಡಿಕೊಂಡಿದ್ದೇವೆ. ಅವರಿಗೆ ಪುನರ್ವಸತಿ ಕಲ್ಪಿಸಲು ಸರ್ಕಾರ ತಯಾರಿದೆ.

ಶ್ರೀ ಗೋವಿಂದ ಎಂ. ಕಾರಜೋಳ: ಅವರ ಗೌರವ ಏನಾಗಿದೆ ಎಂದು ಇಡೀ ದೇಶದ ಮಾಧ್ಯಮದವರೇ ಹೇಳಿದ್ದಾರೆ.

ಶ್ರೀ ಹೆಚ್. ಆಂಜನೇಯ: ಅಲ್ಲಿ ಯಾವುದೇ ರೀತಿಯ ಸಾಮಾಜಿಕ ಬಹಿಷ್ಕಾರ ಆಗಿಲ್ಲ.

ಶ್ರೀ ಗೋವಿಂದ ಎಂ. ಕಾರಜೋಳ: ಇವತ್ತು ಇಲ್ಲದಿರಬಹುದು, ಆದರೆ ಈಗಾಗಲೇ ಬಹಿಷ್ಕಾರ ಮಾಡಿದ್ದಕ್ಕೆ ಏನು ಮಾಡುತ್ತೀರೆಂದು ಹೇಳಿ.

ಅಧ್ಯಕ್ಷರು: ಈಗ ಕೇಸ್ ದಾಖಲು ಮಾಡಿದ್ದಾರೆ, ಕೇಸ್ ನಡೆಯುತ್ತಿದೆ.

ಶ್ರೀ ಹೆಚ್. ಆಂಜನೇಯ: ಯಾರ್ಯಾರು ಅಪರಾಧಿಗಳಾಗಿದ್ದಾರೋ ಅವರ ವಿರುದ್ಧ ಕೇಸ್‌ನ್ನು ಹಾಕಿದ್ದೇವೆ.

ಶ್ರೀ ಗೋವಿಂದ ಎಂ. ಕಾರಜೋಳ: ಕೇಸ್ ಹಾಕಿ arrest ಮಾಡಿದ್ದೇವೆಂದು ಹೇಳಿದರೆ ಮುಗಿದು ಹೋಗುತ್ತಿತ್ತು.

ಅಧ್ಯಕ್ಷರು: ಇನ್ನು ಸಾಕು.